ಇ) ಉದ್ಭವಿಸುವುದಿಲ್ಲ.

**ರಾಜ್ಯದಲ್ಲಿರುವ ಬೃಹತ್ ಅಣೆಕಟ್ಟುಗಳ ನೀರಾವರಿ ಕ್ಷೇತ್ರಗಳು ಮತ್ತು ನೀರಾವರಿ ಯೋಜನೆಗಳು**

81(154) ಶ್ರೀ ಪಾಟೀಲ್ (ನಡಹಳ್ಳಿ) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಬೃಹತ್ ಹಾಗೂ ಮಧ್ಯಮ ಅಣೆಕಟ್ಟುಗಳ ಸಂಖ್ಯೆ ಎಷ್ಟು; ಅವು ಯಾವುವು ಮತ್ತು ಎಲ್ಲಿವೆ. ಅವುಗಳ ಹೆಸರಿನೊಂದಿಗೆ ಎಷ್ಟು ಪ್ರಮಾಣದಲ್ಲಿ ನೀರು ಸಂಗ್ರಹವಾಗುತ್ತವೆ; (ವಿವರ ಒದಗಿಸುವುದು)

ಆ) ರಾಜ್ಯದಲ್ಲಿರುವ ಬೃಹತ್ ಮತ್ತು ಮಧ್ಯಮ ಅಣೆಕಟ್ಟುಗಳನ್ನು ಎಂದು ನಿರ್ಮಿಸಲಾಗಿದೆ. ತಜ್ಞರು ಸದರಿ ಅಣೆಕಟ್ಟುಗಳ ಎಷ್ಟು ವರ್ಷಗಳ ಬಾಳಿಕೆ ಬಗ್ಗೆ ಅಂದಾಜಿಸಿದ್ದಾರೆ (ಅಣೆಕಟ್ಟುಗಳ ಹೆಸರು, ನಿರ್ಮಾಣ, ದಿನಾಂಕ ಮತ್ತು ಅದರ ಆಯುಷ್ಯದೊಂದಿಗೆ ವಿವರ ನೀಡುವುದು);

ಇ) ರಾಜ್ಯದಲ್ಲಿರುವ ಪ್ರತಿ ಅಣೆಕಟ್ಟಿಗೆ ನಿಗದಿಯಾಗಿರುವ ನೀರಾವರಿಗೆ ಒಳಪಡುವ ಕ್ಷೇತ್ರವೆಷ್ಟು; (ಅಣೆಕಟ್ಟುವಾರು ವಿವರ ನೀಡುವುದು);

ಈ) ಆಯಾ ಅಣೆಕಟ್ಟಿನಲ್ಲಿ ನಿಗದಿಯಾಗಿರುವ ನೀರಾವರಿ ಯೋಜನೆಗಳು ಪೂರ್ಣಗೊಂಡಿವೆಯೇ; ಹಾಗಿದ್ದಲ್ಲಿ, ಎಷ್ಟು ನೀರಾವರಿ ಯೋಜನೆಗಳು ಬಾಕಿ ಇವೆ; (ಅಣೆಕಟ್ಟುವಾರು ವಿವರ ನೀಡುವುದು)

ಉ) ಬಾಕಿ ಉಳಿದ ನೀರಾವರಿ ಯೋಜನೆಗಳು ಪೂರ್ಣಗೊಳಿಸಬೇಕಾದಲ್ಲಿ ನಿಗದಿಪಡಿಸಿದ ಕಾಲಾವಧಿ ಎಷ್ಟು ಮತ್ತು ಅದಕ್ಕೆ ಖರ್ಚಾಗುವ ಹಣವೆಷ್ಟು ಕಾಮಗಾರಿಗಳು ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಅಣೆಕಟ್ಟುವಾರು ವಿವರ ನೀಡುವುದು)?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು)

ಅ) ರಾಜ್ಯದಲ್ಲಿ ಪೂರ್ಣಗೊಂಡಿರುವ ಬೃಹತ್ ಹಾಗೂ ಮಧ್ಯಮ ಅಣೆಕಟ್ಟುಗಳ ಸಂಖ್ಯೆ ಅನುಕ್ರಮವಾಗಿ 52 ಮತ್ತು 19 ಇರುತ್ತದೆ. ಅವುಗಳ ಸ್ಥಳ, ಹೆಸರು, ನೀರು ಸಂಗ್ರಹಣಾ ಸಾಮರ್ಥ್ಯದ ವಿವರಗಳನ್ನು ಅನುಬಂಧ–(1) ಮತ್ತು (2)ರಲ್ಲಿ ಒದಗಿಸಲಾಗಿದೆ.

ಅ) ರಾಜ್ಯದಲ್ಲಿ ನಿರ್ಮಿಸಲಾದ ಬೃಹತ್ ಹಾಗೂ ಮಧ್ಯಮ ಅಣೆಕಟ್ಟುಗಳ ವಿವರಗಳನ್ನು ಅನುಬಂಧ–1ರಲ್ಲಿ ಒದಗಿಸಲಾಗಿದೆ. ಆಣೆಕಟ್ಟುಗಳ ಬಾಳಿಕೆ ಕುರಿತಂತೆ ಅಧ್ಯಯನ ಕೈಗೊಂಡಿರುವುದಿಲ್ಲ. ವಾಡಿಕೆಯಂತೆ ಅಣೆಕಟ್ಟುಗಳ ಸರಾಸರಿ ಆಯುಷ್ಯ 100 ವರ್ಷಗಳೆಂದು ಅಂದಾಜಿಸಲಾಗಿದೆ.

ಇ) ನೀರಾವರಿಗೆ ಒಳಪಡುವ ಅಣೆಕಟ್ಟುವಾರು ಕ್ಷೇತ್ರದ ವಿವರಗಳನ್ನು ಅನುಬಂಧ–(1) ಮತ್ತು (2)ರಲ್ಲಿ ಒದಗಿಸಲಾಗಿದೆ.

ಈ) ಪ್ರಗತಿಯಲ್ಲಿರುವ ನೀರಾವರಿ ಯೋಜನೆಗಳಲ್ಲಿ ಸೃಷ್ಟಿಸಲಾದ ಹಾಗೂ ಬಾಕಿಯಿರುವ ನೀರಾವರಿ ಕ್ಷೇತ್ರದ ವಿವರಗಳನ್ನು ಅನುಬಂಧ–2ರಲ್ಲಿ ಒದಗಿಸಲಾಗಿದೆ.

ಉ) ಪ್ರಗತಿಯಲ್ಲಿರುವ ನೀರಾವರಿ ಯೋಜನೆಗಳಿಗೆ ನಿಗದಿಪಡಿಸಲಾದ ಕಾಲಾವಧಿ ಮತ್ತು ಬಾಕಿ ಮೊತ್ತದ ವಿವರಗಳನ್ನು ಅನುಬಂಧ–2ರಲ್ಲಿ ಒದಗಿಸಲಾಗಿದೆ. ಸದರಿ ಯೋಜನೆಗಳನ್ನು ಪೂರ್ಣಗೊಳಿಸಲು ಆಯವ್ಯಯದಲ್ಲಿ ಒದಗಿಸಲಾದ ಅನುದಾನಕ್ಕೆ ಎದುರಾಗಿ ಕಾರ್ಯ ಯೋಜನೆ ರೂಪಿಸಲಾಗುವುದು.

**ಶ್ರೀ ಪಾಟೀಲ್ ಎಸ್. (ನಡಹಳ್ಳಿ) ವಿಧಾನ ಸಭಾ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ 154ಕ್ಕೆ ಅನುಬಂಧ–1 ಮತ್ತು 2**

| ಕ್ರ ಸಂ. | ಯೋಜನೆ ಹೆಸರು | ಸ್ಥಳ/ಜಿಲ್ಲೆ | ಪೂರ್ಣ ಗೊಂಡ ವರ್ಷ | ಸಂಗ್ರಹಣಾ ಸಾಮರ್ಥ್ಯ (ಟಿಎಂಸಿ) ಗಳಲ್ಲಿ | ನೀರಾವರಿ ಕ್ಷೇತ್ರ ಹೆಕ್ಟೇರ್ ಗಳಲ್ಲಿ) |
|---|---|---|---|---|---|
| 1 | 2 | 3 | 4 | 5 | 6 |
| ಪೂರ್ಣಗೊಂಡ ಅಣೆಕಟ್ಟುಗಳು<br>ಬೃಹತ್ ಅಣೆಕಟ್ಟುಗಳು | | | | | |
| 1 | ಘಟಪ್ರಭಾ | ಬೆಳಗಾಂ | 1980 | 51.00 | 139383 |
| 2 | ತುಂಗಾ ಅಣೆಕಟ್ಟು | ಶಿವಮೊಗ್ಗ | 1956 | 11.50 | 8704 |
| 3 | ತುಂಗಭದ್ರಾ ಯೋಜನೆ | ಹೊಸಪೇಟೆ | 1986 | 104.35 | 363738 |

| 1 | 2 | 3 | 4 | 5 | 6 |
|---|---|---|---|---|---|
| 4 | ವಾಣಿವಿಲಾಸ ಸಾಗರ | ಚಿತ್ರದುರ್ಗ | 1908 | 5.25 | 9190 |
| 5 | ಭದ್ರಾ | ಶಿವಮೊಗ್ಗ | 2010–11 | 61.70 | 105570 |
| 6 | ಕೆ.ಆರ್. ಸಾಗರ | ಮಂಡ್ಯ | 1944 | 61.20 | 79312 |
| 7 | ನುಗು ಜಲಾಶಯ | ಮೈಸೂರು | 1959 | 7.70 | 10526 |
| 8 | ಹಾರಂಗಿ | ಕೊಡಗು | 1982 | 8.50 | 54634 |
| **ಮಧ್ಯಮ ಅಣೆಕಟ್ಟುಗಳು** | | | | | |
| 1 | ಅಂಬ್ಲಿಗೋಳ | ಶಿವಮೊಗ್ಗ | 1964 | 1.10 | 2955 |
| 2 | ಅಂಜನಾಪುರ | ಶಿವಮೊಗ್ಗ | 1936 | 2.50 | 6736 |
| 3 | ಅರೆಶಂಕರ | ಬಿಜಾಪುರ | 1957 | 0.20 | 1255 |
| 4 | ಭದ್ರಾ ಅಣೆಕಟ್ಟು | ಶಿವಮೊಗ್ಗ | 1926 | 3.10 | 4466 |
| 5 | ಚಂದ್ರಂಪಳ್ಳಿ | ಗುಲ್ಬರ್ಗಾ | 1972 | 1.90 | 5223 |
| 6 | ಚಿತವಾಡಗಿ | ಗುಲ್ಬರ್ಗಾ | 1971 | 0.10 | 891 |
| 7 | ಧರ್ಮ | ಉತ್ತರ ಕನ್ನಡ | 1964 | 1.10 | 5668 |
| 8 | ಗಾಯತ್ರಿ | ಚಿತ್ರದುರ್ಗ | 1963 | 0.45 | 2305 |
| 9 | ಹಗರಿ ಬೊಮ್ಮನಹಳ್ಳಿ | ಬಳ್ಳಾರಿ | 1978 | 1.40 | 5757 |
| 10 | ಹತ್ತಿಕುಣಿ | ಗುಲ್ಬರ್ಗಾ | 1973 | 2.00 | 2966 |
| 11 | ಜಂಬದಹಳ್ಳ | ಚಿಕ್ಕಮಗಳೂರು | 1968 | 0.40 | 2145 |
| 12 | ಕಳಾಸ್ ಕೋಪ್ | ಬಿಜಾಪುರ | 1960 | 0.70 | 1538 |

| 1 | 2 | 3 | 4 | 5 | 6 |
|---|---|---|---|---|---|
| 13 | ಕನಕನಾಲಾ | ಕೊಪ್ಪಳ | 1975 | 0.14 | 1143 |
| 14 | ಕೊಳ್ಳಿ ವಿಯರ್ | ಬೆಳಗಾಂ | 1953 | 0.27 | 2064 |
| 15 | ನಾಗಥಾಣಾ | ಬಿಜಾಪುರ | 1961 | 0.70 | 1275 |
| 16 | ನಾರಾಯಣ ಪುರ | ಶಿವಮೊಗ್ಗ | 1961 | 0.12 | 650 |
| 17 | ನಾರೀಹಳ್ಳ | ಬಳ್ಳಾರಿ | 1979 | 0.74 | 1624 |
| 18 | ರಾಜೋಳಿ ಬಂಡಾ | ರಾಯ ಚೂರು | 1960 | 0.90 | 1512 |
| 19 | ರಾಮನಹಳ್ಳಿ | ಬಿಜಾಪುರ | 1958 | 1.20 | 2380 |
| 20 | ಸೌದಾಗರ್ | ಗುಲ್ಬರ್ಗಾ | 1987 | 0.32 | 1943 |
| 21 | ಮುಲ್ಲಾಮಾರಿ ಮೇಲ್ದಂಡೆ | ಬೀದರ್ | 2005 | 0.26 | 1417 |
| 22 | ಬೈರಮಂಗಲ | ರಾಮ ನಗರ | 1945 | 0.78 | 300 |
| 23 | ಚಿಕ್ಕಹೊಳೆ | ಚಾ. ನಗರ | 1969 | 1.00 | 1619 |
| 24 | ಗುಂಡಾಲ್ | ಚಾ.ನಗರ | 1980 | 0.70 | 1650 |
| 25 | ಹೆಬ್ಬಳ್ಳ | ಮೈಸೂರು | 1972 | 1.40 | 4048 |
| 26 | ಕಣ್ವ | ರಾಮ ನಗರ | 1946 | 0.40 | 1214 |
| 27 | ಮಂಗಳಾ | ತುಮ ಕೂರು | 1970 | 1.20 | 2076 |
| 28 | ಮಾರ್ಕೋನ ಹಳ್ಳಿ | ತುಮ ಕೂರು | 1941 | 0.60 | 850 |
| 29 | ನಲ್ಲೂರು ಅಮಾನಿಕೆರೆ | ಮೈಸೂರು | 1987 | 4.00 | 4560 |

| 1 | 2 | 3 | 4 | 5 | 6 |
|---|---|---|---|---|---|
| 30 | ಸುವರ್ಣಾವತಿ | ಮೈಸೂರು | 1984 | 0.30 | 1300 |
| 31 | ಚಿಕ್ಲಿಹೊಳೆ | ಕೊಡಗು | 2007 | 3.60 | 2833 |
| 32 | ಬಾಚಂಕಿ | ಉ.ಕನ್ನಡ | 1976 | 0.80 | 865 |
| 33 | ತೀತಾ | ತುಮಕೂರು | 1987 | 0.52 | 1776 |
| 34 | ಚುಲ್ಕಿನಾಲಾ | ಬೀದರ್ | 2004 | 0.36 | 1214 |
| 35 | ಹರಿನಾಲಾ | ಬೆಳಗಾಂ | 1977 | 0.64 | 3480 |
| 36 | ಹಿರೇಹಳ್ಳ | ಕೊಪ್ಪಳ | 2009–10 | 2.27 | 8330 |
| 37 | ಅರ್ಕಾವತಿ | ಬೆಂಗಳೂರು | 2009–10 | 0.00 | 809 |
| 38 | ಮಂಚನಬೆಲೆ | ರಾಮನಗರ | 2009–10 | 0.00 | 324 |
| 39 | ತಾರಕ | ಮೈಸೂರು | 2009–10 | 0.55 | 1983 |
| 40 | ಉಡುತೊರೆಹಳ್ಳ | ಮೈಸೂರು | 2009–10 | 1.20 | 1690 |
| 41 | ಚುಲ್ಕಿನಾಲಾ | ಗುಲ್ಬರ್ಗಾ | 2009–10 | 0.21 | 526 |
| 42 | ಹಾರಂಗಿ | ಕೊಡಗು | 2009–10 | 21.50 | 107265 |
| 43 | ಮಾರ್ಕಂಡೇಯ | ಬೆಳಗಾಂ | 2007 | 4.00 | 19105 |
| 44 | ಮಸ್ಕಿನಾಲಾ | ರಾಯಚೂರು | 2007 | 0.46 | 3001 |

**ರೈತರ ಜಮೀನಿನ ಸರ್ವೆ ನಕ್ಷೆ ವಿಳಂಬವಾಗುತ್ತಿರುವುದು**

82(155) ಶ್ರೀ ಪ್ರತಾಪಗೌಡ ಪಾಟೀಲ್ (ಮಸ್ಕಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?